**ಓ ಎಸ್ ನಂ.254/2017**
**ಪಿ ಡಬ್ಲ್ಯೂ: 2**

**ದಿ:06.02.2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಸಿ.ಬಿ ವಕೀಲರಿಂದ:**

ನನ್ನ ಊರು ಕುಂಟಕೆಂಚಯ್ಯನಹಟ್ಟಿ ಎಂದರೆ ಸರಿ. ದಾವಾ ಸ್ವತ್ತಿಗು ಹಾಗೂ ನನ್ನ ಊರಿಗೂ ಸುಮಾರು 4.ಕಿ.ಮೀ. ಇದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಸುಮಾರು 2.ಕಿ.ಮೀ. ಇದೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿಯಾಗಲೀ ಅಥವಾ ವಿಸ್ತೀರ್ಣವಾಗಲೀ ಹೇಳಲು ನನಗೆ ಬರುವುದಿಲ್ಲ. 1ನೇ ವಾದಿಯಾದ ಸುಶೀಲಮ್ಮನವರಿಗೆ ಎಷ್ಟು ಜನ ಸಹೋದರಿಯರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯಾದ ಚಂದ್ರಪ್ಪರವರಿಗೆ ಎಷ್ಟು ಜನ ಸಹೋದರರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯಾದ ಚಂದ್ರಪ್ಪ ಮತ್ತು ಅವರ ಕುಟುಂಬದವರು ಪಾಲು ವಿಭಾಗ ಮಾಡಿಕೊಂಡ ಸಂದರ್ಭದಲ್ಲಿ ನಾನು ಹಾಜರಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳಿಗೆ ನಾನು ಸಂಬಂಧಿಕನಲ್ಲ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ವಾದಿಯ ಮಾತನ್ನು ಕೇಳಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1ನೇ ವಾದಿಯಾದ ಸುಶೀಲಮ್ಮನವರು ಬಾಗೂರಿನಲ್ಲಿ ವಾಸವಿರುತ್ತಾರೆ ಎಂದರೆ ಸರಿ. 1ನೇ ವಾದಿಯಾದ ಸುಶೀಲಮ್ಮನವರ ಒಬ್ಬ ಸಹೋದರಿ ಹೊಸದುರ್ಗದಲ್ಲಿ ಹಾಗೂ ಇನ್ನೊಬ್ಬ ಸಹೋದರಿ ದಾವಣಗೆರೆಯಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹೊಸದುರ್ಗ.